"ಸರ್..." ದೈನ್ಯದಿಂದ ಆ ಹುಡುಗಿ ಕೂಗಿದಳು.

"ಸರ್, ನಾನು ಇಲ್ಲಿಗೆ ಆಡಿಶನ್‌ಗೆ ಬಂದಿದ್ದು ನನ್ನ ತಂದೆ ತಾಯಿಗೆ ಗೊತ್ತಿಲ್ಲ. ನಾನು ಸಿನಿಮಾ ಸೇರುವುದು ಅವರಿಗೆ ಇಷ್ಟವಿಲ್ಲ. ಈಗ ಈ ವಿಷಯ ಹೊರಬಂದರೆ ಮನೆಯಲ್ಲಿ ಕಷ್ಟ ಆಗುತ್ತದೆ ಸರ್. ಹೇಗಾದರೂ ಮಾಡಿ ನನ್ನ ಹೆಸರು ಎಲ್ಲೂ ಬರದಂತೆ ಮಾಡಿ ಸರ್ ಪ್ಲೀಸ್."

ನಾಗೇಶ್‌ಗೆ ಆ ಹುಡುಗಿಯ ಇಕ್ಕಟ್ಟು ಅರ್ಥವಾಯಿತು. ಆದರೆ ಅವನು ಏನೂ ಮಾಡುವಂತಿರಲಿಲ್ಲ. ಕ್ರೈಂ ಸೀನ್ ಮೊದಲು ನೋಡಿದ್ದು ಅವಳೇ. ಇಡೀ ಕೇಸ್ ಪ್ರಾರಂಭವಾಗುವುದೇ ಆ ಹುಡುಗಿಯ ಸಾಕ್ಷಿಯಿಂದ. ಅವಳ ಸಾಕ್ಷಿ ಇಡೀ ಕೇಸ್ ಮುಗಿಯುವವರೆಗೂ ಅತೀ ಮುಖ್ಯ. ಅವಳ ಐಡೆಂಟಿಟಿ ಹೊರಬಂದೇ ಬರುತ್ತದೆ. ಮುಚ್ಚಿಡಲು ಸಾಧ್ಯವೇ ಇಲ್ಲ.

"ಇಲ್ಲಮ್ಮ... ಕಾನೂನಿನಲ್ಲಿ ಅವಕಾಶವಿದ್ದರೂ ಹಾಗೆ ಮುಚ್ಚಿಡಲು ಸಾಧ್ಯವಿಲ್ಲ. ಈ ಕೇಸ್ ಕೋರ್ಟ್‌ಗೆ ಹೋದಾಗ ನೀನು ಸಾಕ್ಷಿ ಹೇಳಲೇಬೇಕಾಗುತ್ತದೆ... ನಿನ್ನ ತಂದೆ ತಾಯಿಗೆ ಹೇಗೆ ಹೇಳುತ್ತಿಯೋ ಅದು ನಿನ್ನ ಜವಾಬ್ದಾರಿ. ಆದರೆ ಈ ಕೇಸ್‌ನ ತನಿಖೆಗೆ ನಿನ್ನ ಸಹಾಯ ಅತೀ ಮುಖ್ಯ" ಎನ್ನುತ್ತಾ ಕ್ರೈಂ ಸೀನ್ ನೋಡಲು ಮೇಲೆ ಹೊರಟ.

ಆ ಮೂರಂತಸ್ತಿನ ಕಟ್ಟಡದ ಎರಡನೇ ಮತ್ತು ಮೂರನೇ ಮಹಡಿಯನ್ನು ಒಂದು ಡ್ಯೂಪ್ಲೆಕ್ಸ್ ಆಫೀಸಾಗಿ ಪರಿವರ್ತಿಸಲಾಗಿತ್ತು. ಎರಡನೇ ಮಹಡಿಯಲ್ಲಿ ಚೇತನ್‌ಕುಮಾರ್‌ನ ಆಫೀಸ್, ಮೂರನೇ ಮಹಡಿಯಲ್ಲಿ, ಪ್ರೊಡಕ್ಷನ್ ಆಫೀಸ್ ಮತ್ತು ಆಡಿಶನ್ ರೂಂ ಮಾಡಲಾಗಿತ್ತು. ಚೇತನ್‌ಕುಮಾರ್, ವಿಸಿಟರ್ ಛೇರ್ ಮೇಲೆ ಕುಳಿತಿದ್ದು, ತನ್ನ ಟೇಬಲ್ ಮೇಲೆಯೇ ಮುಖಾಡೆ ಬಿದ್ದಿದ್ದ. ಅವನ ತಲೆಯ ಹಿಂಭಾಗಕ್ಕೆ ಭಾರವಾದ ವಸ್ತುವಿನಿಂದ ಅನೇಕಬಾರಿ ಹೊಡೆಯಲಾಗಿತ್ತು. ಆ ಹೊಡೆತದ ರಭಸಕ್ಕೆ ತಲೆಯ ಹಿಂಭಾಗ ಜಜ್ಜಿ ಮೆದುಳಿನ ಭಾಗವೆಲ್ಲಾ ಹೊರಬಂದಿತ್ತು.

ನಾಗೇಶ್ ಒಳಗಡೆ ಬಂದು, ಆ ಶವವನ್ನು ದೀರ್ಘವಾಗಿ ಒಮ್ಮೆ ಪರಿಶೀಲಿಸುತ್ತಾ,

"ಏನು ಇವನ ಬ್ಯಾಕ್ ಗ್ರೌಂಡ್ ಸುರೇಶ್?"

"ಹೆಸರು ಚೇತನ್‌ಕುಮಾರ್, ಸಿನಿಮಾ ಪ್ರೊಡ್ಯೂಸರ್, ಸಾಧಾರಣವಾಗಿ ಹೊಸಬರನ್ನು ಇಟ್ಟುಕೊಂಡು ಸಿನಿಮಾ ಮಾಡುತ್ತಿದ್ದರು. ತಮ್ಮ ಹೊಸ ಸಿನಿಮಾಗೆ ಇವತ್ತೂ ಆಡಿಶನ್‌ಗೆ ಕರೆದಿದ್ದಾರೆ. ಅಷ್ಟರಲ್ಲಿ ಯಾರೋ ಬಂದು ಕೊಲೆ ಮಾಡಿದ್ದಾರೆ."

ಇನ್‌ಸ್ಪೆಕ್ಟರ್ ಸುರೇಶ್ ರಿಪೋರ್ಟ್ ನೀಡಿದ.

"ಇವನ ಆಫೀಸಿನವರು ಯಾರೂ ಇಲ್ಲವಾ?"

"ಪ್ರೊಡಕ್ಷನ್ ಇದ್ದರೆ ಜನ ಇರ್ತಾರೆ ಸರ್. ಅಲ್ಲದೇ ಶೋಕಿಲಾಲ ಬೇರೆ. ಏನೋ ಬೇರೆ ಯೋಜನೆ ಇಟ್ಟುಕೊಂಡೇ ಆಡಿಶನ್‌ಗಾಗಿ ಕರೆದಿದ್ದಾನೆ." ನಾಗೇಶ್ ಇನ್ನೊಮ್ಮೆ ಆ ಶವವನ್ನ ನೋಡಿದ.

"ಇದು ಯಾರೋ ದ್ವೇಷದಿಂದ ಹೊಡೆದಿರುವ ಹಾಗಿದೆ. ಸಾಯುವ ಮುನ್ನ ಇಲ್ಲೊಂದು ಸಣ್ಣ ಕಿತ್ತಾಟ ನಡೆದಿರಬೇಕು. ಕೊಲೆ ಮಾಡಿದ ಮೇಲೆ ಮತ್ತೆ ಇಲ್ಲಿರುವ ವಸ್ತುಗಳನ್ನೆಲ್ಲಾ ಮತ್ತೆ ಜೋಡಿಸಿಟ್ಟು ಹೋಗಿದ್ದಾರೆ." ಫೋರೆನ್ಸಿಕ್‌ನವರು ತಮ್ಮ ಕೆಲಸ ಬಿಟ್ಟು ನಾಗೇಶನ ಕಡೆ ನೋಡಿದರು. ಅವನ ಮಾತುಗಳಲ್ಲಿ ಅವರಿಗೆ ತಾವೇನು ಹುಡುಕಬೇಕು ಎನ್ನುವ ಸೂಚನೆ ಸಿಕ್ಕಿತು.

"ಅಂದರೆ ಕೊಲೆ ಮಾಡಿದವರಿಗೆ ಚೇತನ್‌ಕುಮಾರ್ ಯಾರನ್ನು, ಯಾವಾಗ ಭೇಟಿಯಾಗಲಿದ್ದಾನೆ ಎಂದು ತಿಳಿದಿರಬೇಕು ಅಲ್ಲವಾ ಸಾರ್."

"ಸಾವು ಆಗಿ ಸುಮಾರು ಒಂದೂವರೆ ಗಂಟೆಯಾಗಿದೆ. ಅಂದರೆ, ಆ ಕೆಳಗಡೆ ಕುಳಿತಿರುವ ಹುಡುಗಿ ಬರುವ ಒಂದು ಗಂಟೆ ಮೊದಲು ಬಂದವರು ಇವನನ್ನು ಸಾಯಿಸಿ, ಇಲ್ಲಿಂದ ಹೋಗಿದ್ದಾರೆ. ಆ ಹುಡುಗಿ ಅಥವಾ ಕೆಳಗಡೆ ಇರುವ ಯಾರಾದರೂ... ಸುಮಾರು ಐದು ಗಂಟೆಯ ಆಸುಪಾಸಿಗೆ